ಶ್ರೀ ಬಿ.ಹೆಚ್. ಬನ್ನಿಕೋಡ್:- ಕೇಂದ್ರದ ಯೋಜನೆಯನ್ನು ಜಾರಿಗೆ ತರಲು ಒತ್ತಾಯ ಮಾಡಬೇಕು. ರೈತರ ಸಾಲ ಮನ್ನಾ ಮಾಡಲಿಕ್ಕೆ ಇವತ್ತಾದರೂ ಒಪ್ಪಿಕೊಳ್ಳಿ

(ಗೊಂದಲ)

ಶ್ರೀ ಸಿ. ಬೈರೇಗೌಡ:- ನಾನು ಮಾತನಾಡುವಾಗ ಹೇಳಿದೆ...

ಅಧ್ಯಕ್ಷರು:- ಕಾಗೋಡು ತಿಮ್ಮಪ್ಪನವರೇ ತಮಗೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ:- ನಾನು ಆಗಲೆ ಸರ್ಕಾರ ಇದರಲ್ಲಿ ಮೊಂಡುತನವನ್ನು ಬಿಡಬೇಕು ಎಂಬ ಮಾತನ್ನು ಹೇಳಿದ್ದೇನೆ. ಈಗ ಸರ್ಕಾರದ ಈ ಮೊಂಡುತನವನ್ನು ಪ್ರತಿಭಟಿಸಿ ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರಾದ ಭೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಹಕ್ಕುಭಾದ್ಯತಾ ನಿರ್ಣಯ ಇದೆ. ಇದರ ಬಗ್ಗೆ ಸೂಚನೆ ಕಳಿಸಿದ್ದೇನೆ..

ಅಧ್ಯಕ್ಷರು:- ತಿಮ್ಮಪ್ಪನವರೆ, ನೀವು ವಾಟಾಳ್ ನಾಗರಾಜ್‌ರವರಿಗೆ ಯೀಲ್ಡ್ ಆಗುತ್ತೀರಾ.

ಒಬ್ಬ ಮಾನ್ಯ ಸದಸ್ಯರು:- ಈಗ ಹೊರಗಡೆ ಹೋಗಿದ್ದರು ಮತ್ತೆ ಬಂದಿದ್ದಾರೆ.

(ಗೊಂದಲ)

ಹಕ್ಕು ಬಾಧ್ಯತಾ ಸೂಚನೆ

ರಾಜ್ಯದಲ್ಲಿ ಕನ್ನಡವನ್ನು ಜಾರಿಗೆ ತರುವ ಬಗ್ಗೆ ಚರ್ಚೆ ನಡೆದಾಗ ಮಾನ್ಯ ಸದಸ್ಯರಾದ ಶ್ರೀ ವಜೀರ್ ಅಹಮದ್‌ರವರು ನಿಂದಿಸಿ ಮಾತನಾಡಿದ ಬಗ್ಗೆ

11.05 ಎ.ಎಂ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಇಲಾಖೆಗಳ ಬೇಡಿಕೆಗಳ ಬಗ್ಗೆ ಉತ್ತರವನ್ನು ನೀಡುತ್ತಿರುವಾಗ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅವಕಾಶ ಕೊಡುವ ನೀತಿ ಬಗ್ಗೆ ಅವರು ವಿಚಾರಸರಣಿಯನ್ನು ಸದನದಲ್ಲಿ ಮಂಡಿಸುತ್ತಾ ಇದ್ದರು. ಆ ಸಂದರ್ಭದಲ್ಲಿ ನಾವು ಸರ್ಕಾರದ ನೀತಿ ಕನ್ನಡದ ಮಾಧ್ಯಮದ ಪರವಾಗಿರಬೇಕೇ ಹೊರತು, ಇಂಗ್ಲೀಷ್ ಮಾಧ್ಯಮದ ಪರವಾಗಿ ಇರಬಾರದು ಎನ್ನತಕ್ಕಂಥ ವಾದವನ್ನು ಮಂಡಿಸುವುದಕ್ಕೆ ಈ ಸದನದಲ್ಲಿ ಎದ್ದು ತಮ್ಮ ಗಮನ ಸೆಳೆದು ಮಾತನ್ನು ಪ್ರಾರಂಭಮಾಡಿದಾಗ ಗೊಂದಲ ವಾತಾವರಣ ನಿರ್ಮಾಣವಾಗಿ ಈ ಸಭೆಯ ಬಿನ್ನಿಪೇಟೆ ಕ್ಷೇತ್ರದ ಶಾಸಕರಾದ ನಜೀರ್ ಅಹಮದ್‌ರವರು ಕನ್ನಡದ ಹೋರಾಟ ಹೊಟ್ಟೆಪಾಡಿಗಾಗಿ ಎನ್ನತಕ್ಕಂಥ ಮಾತನ್ನು.....

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಹಕ್ಕು ಬಾಧ್ಯತಾ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯ ಸದಸ್ಯನಾಗಿ ಕೆಲಸ ಮಾಡತಕ್ಕಂಥ ನನ್ನ ಪ್ರತಿಷ್ಠೆಗೆ ಬಹಳ ಕಳಂಕ ತರತಕ್ಕಂಥ ಮಾತನ್ನು ಅವರು ಆಡಿದ್ದಾರೆ. ಇದು ನನ್ನ ಹಕ್ಕಿಗೆ ಚ್ಯುತಿಯಾಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸುವುದಕ್ಕೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು:- ನೀವು ಕಳಿಸಿರತಕ್ಕ ಸೂಚನೆ ನನಗೆ ಈಗ ತಲುಪಿದೆ. ಅದರ ಬಗ್ಗೆ ನಾನು ನನ್ನ ರೂಲಿಂಗನ್ನು ಈ ದಿವಸ ಕೊಡುತ್ತೇನೆ.